Confederation of Indian Industry

CII EXCON

| | |
|---|---|
| Headline | “Infrastructure is the key to boost Indian Economy”:Bommai |
| **Publication** | Hosadigantha |
| **Date** | 18.05.2022 |
| **Location** | Bangalore |

ಹೊಸ ದಿಗಂತ 1
18 May 2022

ಎಕ್ಸ್‌ಕಾನ್‌ಮೇಳದಲ್ಲಿ ಕೇಂದ್ರ ಸಚಿವ ಜ| ವಿ.ಕೆ. ಸಿಂಗ್ ಹೇಳಿಕೆ

# ₹100 ಲಕ್ಷ ಕೋಟಿ ಹೂಡಿಕೆ

**ಬೆಂಗಳೂರು:** ಮುಂದಿನ 5 ವರ್ಷಗಳಲ್ಲಿ ಮೂಲ ಸೌಕರ್ಯ ಕ್ಷೇತ್ರದಲ್ಲಿ 100 ಲಕ್ಷ ಕೋಟಿ ರೂ. ಹೂಡಿಕೆ ಮಾಡಲಾಗುವುದು ಎಂದು ಕೇಂದ್ರ ಸಚಿವ ಜನರಲ್ ವಿ.ಕೆ. ಸಿಂಗ್ ತಿಳಿಸಿದರು.

ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ(ಬಿಐಇಸಿ) ಮಂಗಳವಾರ ಆರಂಭವಾದ ಐದು ದಿನಗಳ ದಕ್ಷಿಣ ಏಷ್ಯಾ ನಿರ್ಮಾಣ ಉಪಕರಣಗಳ ವಾಣಿಜ್ಯ ಮೇಳ ಸಿಐಐ ಎಕ್ಸ್‌ಕಾನ್-2022ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತವು ಹೈಡ್ರೋಜನ್ ಇಂಧನ ತಂತ್ರಜ್ಞಾನ ಮತ್ತು ಸೌರ ಶಕ್ತಿಯ ಮೇಲೆ ಹೆಚ್ಚಿನ ಶ್ರಮ ವಹಿಸುತ್ತಿದ್ದು, ಇದು ದೇಶದ ಮುಂದಿನ ಭವಿಷ್ಯ ಬದಲಿಸಲಿದೆ. ಉದ್ಯಮಗಳು ಸ್ಪರ್ಧಾತ್ಮಕ ಮಾರುಕಟ್ಟೆ ಪರಿಸ್ಥಿತಿಗೆ ಸಿದ್ಧರಿದ್ದು, ಹೊಸ ಉತ್ಪನ್ನಗಳ ನವೀಕರಿಸಲು ಮೂಲಕ 4.0 ಮೇಲೆ ಕೇಂದ್ರೀಕರಿಸಬೇಕು ಎಂದರು.

ಉತ್ಪಾದನೆ ಮಾಡುವ ವಸ್ತು ಸುದೀರ್ಘ ಬಾಳಿಕೆ ಹಾಗೂ ಅಗ್ಗವಾಗಿರಬೇಕು. ಈ ಎರಡರ ಜೊತೆಗೆ ಉತ್ತಮ ಗುಣಮಟ್ಟದಿಂದ ಕೂಡಿರಬೇಕು. ಮೂಲಸೌಕರ್ಯಗಳು ಕೂಡ ಸುಸ್ಥಿರವಾಗಿರಬೇಕು. ಉತ್ಪಾದನೆ ಮಾಡುವ ವಸ್ತು ಸುದೀರ್ಘ ಬಾಳಿಕೆ ಹಾಗೂ ಅಗ್ಗವಾಗಿರಬೇಕು. ಈ ಎರಡರ ಜೊತೆಗೆ ಉತ್ತಮ ಗುಣಮಟ್ಟದಿಂದ ಕೂಡಿರಬೇಕು. ➘9



## ಬೆಂಗಳೂರು ಹಣಕಾಸಿನ ರಾಜಧಾನಿ: ಬೊಮ್ಮಾಯಿ

ಸಿಎಂ ಬಸವರಾಜ ಬೊಮ್ಮಾಯಿ ಮಾತನಾಡಿ, ಕರ್ನಾಟಕ ಸರ್ಕಾರವು ಮೂಲಸೌಕರ್ಯ ವಲಯವು ಸರ್ಕಾರದಿಂದ ತೀವ್ರವಾದ ಉತ್ತೇಜನ ನೀಡುತ್ತಿದೆ. ಕರ್ನಾಟಕ ಅಂತಾರಾಷ್ಟ್ರೀಯ ಮಾರುಕಟ್ಟೆ ನೀಡುತ್ತಿದ್ದು, ಬೆಂಗಳೂರು ಹಣಕಾಸಿನ ರಾಜಧಾನಿ ಆಗಿದೆ. ಇಲ್ಲಿ ಹೆಚ್ಚು ಹೆಚ್ಚು ಹೂಡಿಕೆದಾರರು ಹೂಡಿಕೆ ಮಾಡುವ ಮೂಲಕ ದೇಶದ ಅಭಿವೃದ್ಧಿ ಸಾಧ್ಯವಾಗಲಿದೆ. ➘9

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ 65,400(64,500) ಅಪರಂಜಿ ಚಿನ್ನ 50,780(50,450) ಆಭರಣ ಚಿ

## 100 ಲಕ್ಷ ಕೋಟಿ ರೂ. ಹೂಡಿಕೆ

1 ➘ **ತಂತ್ರಜ್ಞಾನ ಅಳವಡಿಕೆ ಮುಖ್ಯ:** ಭಾರತವು ನಿರ್ಮಾಣ ಉಪಕರಣಗಳು, ಘಟಕ ಹೊರಗುತ್ತಿಗೆ ವಿನ್ಯಾಸ ಆಧಾರಿತ ಉದಯೋನ್ಮುಖ ಕೇಂದ್ರವಾಗಿದೆ. ನಿರ್ಮಾಣ ಉದ್ಯಮದಲ್ಲಿನ ಖಾಸಗಿ ಸಂಸ್ಥೆಗಳು ಯಾಂತ್ರೀಕೃತಗೊಂಡಿದ್ದು, ಸುಧಾರಿತ ತಂತ್ರಜ್ಞಾನಗಳ ಅಳವಡಿಕೆ ಮಾಡಿಕೊಳ್ಳಲಾಗುತ್ತಿದೆ. ಇಂಧನಗಳ ಬಳಕೆ ಮತ್ತು ನಿರ್ಮಾಣದ ವೆಚ್ಚ ಮತ್ತು ಮಾಲಿನ್ಯದ ದರವನ್ನು ಕಡಿಮೆ ಮಾಡಲು ತ್ಯಾಜ್ಯ ವಸ್ತುಗಳನ್ನು ನಿರ್ಮಾಣ ಯೋಜನೆಗಳಿಗೆ ಕಚ್ಚಾ ವಸ್ತುಗಳಾಗಿ ಬಳಸಿಕೊಳ್ಳಬೇಕು ಎಂದರು.

## ಬೆಂಗಳೂರು ಹಣಕಾಸಿನ ಕಾಪಿಟಲ್: ಬೊಮ್ಮಾಯಿ

1 ➘ ಒಂದು ಕಂಪನಿ ಆರಂಭವಾದರೆ ಆ ಕ್ಷೇತ್ರದಲ್ಲಿ ರಸ್ತೆ ಸೇರಿದಂತೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಅಭಿವೃದ್ಧಿ ಯಾಗಲಿದೆ. ಇದು ಭಾರತದ ಒಟ್ಟಾರೆ ಅಭಿವೃದ್ಧಿ ಮತ್ತು ಜಿಡಿಪಿಯ ಬೆಳವಣಿಗೆಗೆ ಸಹಾಯಕಾರಿಯಾಗಿದೆ. ಭಾರತ ಸರ್ಕಾರವು ಘೋಷಿಸಿದ ಹೊಸ ನೀತಿಗಳು ದೇಶದಲ್ಲಿ ವಿಶ್ವದರ್ಜೆಯ ಮೂಲಸೌಕರ್ಯಗಳ ಕಾಲಮಿತಿಯ ರಚನೆ ಮಾಡಲಿದೆ. ರಾಜ್ಯ ಸರ್ಕಾರ ನಿಮ್ಮ ಜೊತೆ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಲು ಸಿದ್ಧವಿದೆ ಎಂದರು.